(೪) ಮೈಸೂರು ವಿಶ್ವವಿದ್ಯಾನಿಲಯದ ಸಹಕಾರಿ ಸಂಘದ ಬ್ಯಾಂಕಿಗೆ ೧೯೫೯ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ಶಾಸನದ ೧೧ನೇ ಕಲಮಿನಿಂದ ಕೆಲವು ತಿದ್ದುಪಡಿಗಳೊಂದಿಗೆ ವಿನಾಯಿತಿ ನೀಡುವ ಬಗ್ಗೆ ದಿನಾಂಕ ೧೫ನೇ ಆಕ್ಟೋಬರ್ ೧೯೮೭ ರಂದು ಹೊರಡಿಸಲಾದ ಸಿ. ಎಂ. ಡಬ್ಲ್ಯೂ. ೨೦೯ ಸಿ. ಎಲ್. ಎಂ. ೮೭ನೇ ಕ್ರಮಾಂಕದ ಅಧಿಸೂಚನೆಯನ್ನು.

(೫) ಭಾರತ ರೇಷ್ಮೆ ಕೈಗಾರಿಕೆ ಕಾರ್ಖಾನೆ ಮತ್ತು ಕೈಗಾರಿಕಾ ಸಹಕಾರಿ ಸಂಘಗಳ (ತಿದ್ದುಪಡಿ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ ೨೬ನೇ ಸೆಪ್ಟೆಂಬರ್ ೧೯೮೭ ರಂದು ಹೊರಡಿಸಲಾದ ಸಿ ಎಂ. ಡಬ್ಲ್ಯೂ. ೧೯೬ ಸಿ. ಎಲ್. ಎಂ. ೮೭ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಮಂಡಿಸಲಾಯಿತು.

XIV. ಶ್ರೀ ಬಸವರಾಜ ಪಾಟೀಲ್ ತಿಮ್ಮನಗೌಡ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿ) —.ಅವರು-೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧ನೇ ಎ(೩) ಕಲಮಿನ ಮೇರೆಗೆ,

೧೯೮೦-೮೧ನೇ ಸಾಲಿನ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ ವಾರ್ಷಿಕ ವರದಿ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಮಂಡಿಸಲಾಯಿತು.

XV. ಶ್ರೀ ಕೆ. ಬಿ. ಮಲ್ಲಪ್ಪ (ನಿಯಂತ್ರಿತ ಮಾರುಕಟ್ಟೆ ಮತ್ತು ಖುಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿ) ಅವರು-ಭಾರತ ಸಂವಿಧಾನದ ೨೪೩ (೨)ನೇ ಪರಿಚ್ಛೇದದ ಮೇರೆಗೆ ೧೯೮೭ನೇ ಇಸವಿಯ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ(ಎರಡನೇ ತಿದ್ದುಪಡಿ)ಅಧ್ಯಾದೇಶವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಮಂಡಿಸಲಾಯಿತು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಬೆಂಗಳೂರು ಪೆರೇಡ್ ಮೈದಾನದಲ್ಲಿ ಕೇಂದ್ರ ಹಣಕಾಸು ಸಚಿವರಿಂದ ಸಾಲ ಮೇಳದ ಪರಿಣಾಮದ ಬಗ್ಗೆ

ಅಧ್ಯಕ್ಷರು.—ಎರಡು ನಿಲುವಳಿ ಸೂಚನೆಗಳು ಬಂದಿವೆ. ಮೊದಲನೆಯದು ಮಾನ್ಯ ವೆಂಕಟರಾವಮ್ಮನವರಿಂದ ಬಂದಿದೆ. ಎರಡನೆಯದು ಪಾರ್ಟಿ ಹಾಗೂ ಇತರೆ ಸದಸ್ಯರುಗಳಿಂದ ಬಂದಿದೆ.

ಶ್ರೀ ಆರ್. ವೆಂಕಟರಾವಮ್ಮ.—ನಾನು ಓದಿಬಿಡುತ್ತೇನೆ.

ಅಧ್ಯಕ್ಷರು.—ಸ್ವಲ್ಪ ತಡೆಯಿರಿ. ಮಾನ್ಯ ವೆಂಕಟರಾವಮ್ಮನವರು ಕೊಟ್ಟಿರುವಂಥ ನಿಲುವಳಿ ಸೂಚನೆ ಹೀಗಿದೆ.

> ''ದಿನಾಂಕ ೫-೧೨-೧೯೮೭ರಂದು ಬೆಂಗಳೂರು ಪೆರೇಡ್ ಮೈದಾನದಲ್ಲಿ ಕೇಂದ್ರ ಹಣಕಾಸು ಸಚಿವರು ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಜನಾರ್ಧನ ಪೂಜಾರಿಯವರು ಸಾಲಮೇಳ ನಡೆಸಿದರು. ಒಂದು ಲಕ್ಷಕ್ಕೂ ಹೆಚ್ಚು ಹೆಣ್ಣುಮಕ್ಕಳಿಗೆ ಸಾಲಕೊಟ್ಟರು. ಸಾಲಮೇಳಕ್ಕೆ ಹೆಚ್ಚಿಗೆ ಸಾಲ ಕೊಡಲಿಕ್ಕೆ ಯಾರ ಅಭ್ಯಂತರವಿಲ್ಲ. ಸ್ವಾಗತಾರ್ಹ. ಆದರೆ ಸಾಲಮೇಳ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾರ್ವಜನಿಕರ ಸ್ವತ್ತಾದ ಬ್ಯಾಂಕ್‌ಗಳಿಂದ ಹಣ ಬಾಕಿ ಕೊಡುವ ಸಾಲ ಮೇಳವಾಗಿ ಎಲ್ಲಾ ಸಾರ್ವಜನಿಕರಿಗೆ ಸಾಲ ಕೊಡುವ ಮೇಳವಾಗದೆ ''ಕಾಂಗ್ರೆಸ್ ಸಾಲಮೇಳವಾಗಿ'' ಕಾಂಗ್ರೆಸ್ ಪಕ್ಷದ ಬೆಳವಣಿಗೆಗೆ ದುರುಪಯೋಗವಾಗುವಂತಹ ಕಾಂಗ್ರೆಸ್ಸೇತರ ಸರ್ಕಾರ ವನ್ನು ಅಭದ್ರಗೊಳಿಸುವ ಸಾಲಮೇಳವಾಯ್ತು, ಸಾಲಮೇಳ ಕಾಂಗ್ರೆಸ್ ಪಾರ್ಟಿ

ಆಫೀಸುಗಳಿಂದ ಮತ್ತು ಸುಂದರ್ ಅಂತಹ ವಂಧ್ಯವರ್ತಿಗಳಿಂದ ಸಂಘಟಿಸಲ್ಪಟ್ಟು ಜನರಿಂದ ಆಯ್ಕೆಯಾದ ರಾಜ್ಯ ಸರ್ಕಾರ ಮತ್ತು ಶಾಸಕರನ್ನು ಕಡೆಗಣಿಸಿ, ಬ್ಯಾಂಕಿನ ನಾರ್ಮಸ್ಸನ್ನು ಕಡೆಗಣಿಸಿ ತರಾತುರಿಯಾಗಿ ಸಂಘಟಿಸಿದ ಅವ್ಯವಸ್ಥೆಯ ಅನ್ಯಾಯದ ಕ್ರಮವಾಯಿತು. ರಾಜಕೀಯ ಭ್ರಷ್ಟಾಚಾರಕ್ಕೆ ಎಡೆಗೊಟ್ಟಂತಾಗಿ ರಾಜ್ಯ ಕೇಂದ್ರಗಳ ಸಂಬಂಧವೂ ಕೆಡುವಂತಾದ ಕಾಂಗ್ರೆಸ್ ಮೇಳವಾದುದರಿಂದ ಈ ಬಗ್ಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲು ಸದನದ ಮುಂದೆ ಈ ನಿಲುವಳಿ ಸೂಚನೆಯನ್ನು ತರುತ್ತಿದ್ದೇನೆ.''

ಇವರು ಕೊಟ್ಟಿರುವ ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ಹೊಣೆಗಾರಿಕೆ ಯಾವ ರೀತಿಯಲ್ಲಿಯೂ ಇಲ್ಲದೇ ಇರುವುದರಿಂದ, ಇದಕ್ಕೆ ಅಂಗೀಕಾರ ಕೊಡುವುದನ್ನು ತಡೆಹಿಡಿಯಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ನಾವು ಹೇಳುವುದನ್ನು ಸ್ವಲ್ಪ ಕೇಳಿಬಿಡಿ.

(ಗೊಂದಲ)

ಅಧ್ಯಕ್ಷರು.—ಇದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದು.

ಶ್ರೀ ಆರ್. ವೆಂಕಟರಾಮಯ್ಯ.—ಬೆಂಗಳೂರು ಪೆರೇಡ್ ಮೈದಾನದಲ್ಲಿ ಮಾಡಿರುವಂಥಾದ್ದು.

(ಗೊಂದಲ)

ಶ್ರೀ ಧರ್ಮಸಿಂಗ್.—ತಾವು ರೂಲಿಂಗ್ ಕೊಟ್ಟ ಮೇಲೆ ಅವರು ಮಾತನಾಡುತ್ತಿದ್ದಾರೆ. ಈ ರೀತಿ ಆದರೆ ತಾವು ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ.

MR. SPEAKER.—Don't record. **

ಶ್ರೀ ಆರ್. ವೆಂಕಟರಾಮಯ್ಯ.—ತಾವು ಹೇಳುವುದನ್ನು ನಾನು ಒಪ್ಪುವುದಿಲ್ಲ. ತಾವು ಕೊಟ್ಟಿರತಕ್ಕ ರೂಲಿಂಗ್ ಸರಿಯಿಲ್ಲ. ನಾನು ಇದನ್ನು ಪ್ರತಿಭಟನೆ ಮಾಡುತ್ತೇನೆ.

MR. SPEAKER.—Don't record.

ಅಧ್ಯಕ್ಷರು.—ನಾನು ಕೊಟ್ಟಿರುವಂಥ ರೂಲಿಂಗ್ ಅಂತಿಮವಾದುದು.

ಶ್ರೀ ಆರ್. ವೆಂಕಟರಾಮಯ್ಯ.—ಇದು ನ್ಯಾಯವಲ್ಲ. ನಾನು ವಾಕೌಟ್ ಮಾಡುತ್ತೇನೆ.

ಅಧ್ಯಕ್ಷರು.—ನಿಮ್ಮ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮ ಆದೇಶಕ್ಕೆ ಮನ್ನಣೆ ಕೊಡಬೇಕಾದರೆ ನನ್ನ ಮನವಿಯನ್ನು ಸ್ವಲ್ಪ ಕೇಳಿ, ನಿಮ್ಮ ಕೂಗಾಟಕ್ಕೆ ನಾವು ಬಗ್ಗುವುದಿಲ್ಲ.

ಅಧ್ಯಕ್ಷರು.—ತಾವು ರೂಲಿಂಗ್‌ಗೆ ಅಪಮಾನ ಮಾಡುವುದು ಸರಿಯಲ್ಲ. ಆ ರೀತಿ ಮಾಡಿದರೆ ತಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳುವುದನ್ನು ಸ್ವಲ್ಪ ಕೇಳಿಬಿಡಿ.

(ಗೊಂದಲ)

ಅಧ್ಯಕ್ಷರು.—ದಯವಾಡಿ ಮಾನ್ಯ ಸದಸ್ಯರು ಸುಮ್ಮನಿರುತ್ತುಕೊಳ್ಳಬೇಕು. ಈಗ ನಾನು ರೂಲಿಂಗ್ ಆಗಿ ರೂಲಿಂಗ್ ಕೊಟ್ಟಿದ್ದೇನೆ. ದಯವಾಡಿ ಮಾನ್ಯ ಸದಸ್ಯರು ಸುಮ್ಮನಿರುತ್ತುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಬಾರ್ಗೆ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಸರ್ಕಾರದ ವಿರುದ್ಧ ಪ್ರತಿಭಟಿಸಿ ಹೋಗಲಿ. ಆದರೆ ತಮ್ಮ ರೂಲಿಂಗ್ ಪ್ರತಿಭಟಿಸಿ ಹೋಗುತ್ತಿದ್ದಾರೆ.

(ಗೊಂದಲ)

---

*Not recorded as ordered by the Chair.